**ದಿನಾಂಕಃ 03-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀಮತಿ ಎನ್ ಟಿ ಕೆ ವಕೀಲರಿಂದ**

1. ನಾನು ಈ ದಿನ ಮುಖ್ಯ ವಿಚಾರಣೆಗಾಗಿ ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

2. ಈ ಕೆಳಕಂಡ ದಾಖಲಾತಿಗಳನ್ನು ನಾನು ಹಾಜರು ಪಡಿಸುತ್ತಿದ್ದೇನೆ . ಅವುಗಳನ್ನು ನಿಶಾನೆ ಮಾಡಬೇಕಾಗಿ ಕೋರುತ್ತೇನೆ .

ನಿ.ಎಂ.1 – Report of Depot Manager Bhatkal, Depot along with attendance extract.

ನಿ.ಎಂ.2 – Call memo.

ನಿ.ಎಂ.3 – Articles of charge along with past history sheet and postal acknowledgment card.

ನಿ.ಎಂ.4 – Copy of notice of appointment of Enquiry Officer along with postal acknowledgment card.

ನಿ.ಎಂ.5 – Notice of enqiury.

ನಿ.ಎಂ.6 – Returned postal RPAD cover.

ನಿ.ಎಂ.7 – Notice of enquiry notice.

ನಿ.ಎಂ.8 – Enquiry proceedings.

ನಿ.ಎಂ.9 – Notice U/Reg. 23(11) along with postal acknowledgment card dated 10.01.2019.

ನಿ.ಎಂ.10– Notice U/Reg. 23(11) along with postal acknowledgment card dated 25.01.2019.

ನಿ.ಎಂ.11–Notice U/Reg. 23(11) along with postal acknowledgment card dated 13.02.2019.

ನಿ.ಎಂ.12–Notice U/Reg. 23(11) along with returned RPAD postal cover dated 23.02.2019.

ನಿ.ಎಂ.13– Notice U/Reg. 23(11) dated 09.03.2019.

ನಿ.ಎಂ.14– Notice U/Reg. 23(11) dated 05.04.2019.

ನಿ.ಎಂ.15–Notice U/Reg. 23(11) along with postal acknowledgment card dated 04.06.2019.

ನಿ.ಎಂ.16 – Enquiry proceedings.

ನಿ.ಎಂ.17 –Letter of D.T.I., in respect of serving notice of enquiry, enquiry proceedings and letter.

ನಿ.ಎಂ.18– Notice U/Reg. 23(11) along with returned RPAD postal cover dated 01.07.2019.

ನಿ.ಎಂ.19 –Notice U/Reg. 23(11) along with returned RPAD postal cover dated 06.08.2019.

ನಿ.ಎಂ.20– Notice of enquiry.

ನಿ.ಎಂ.21– Letter of D.T.I., in respect of serving notice of enquiry.

ನಿ.ಎಂ.22 –Enquiry proceedings.

ನಿ.ಎಂ.23 –Notice U/Reg. 23(11) along with postal acknowledgment card.

ನಿ.ಎಂ.24– Order sheets of enquiry officer.

ನಿ.ಎಂ.25 –Findings of enquiry officer.

ನಿ.ಎಂ.26– Show cause notice dated 04.10.2019.

ನಿ.ಎಂ.27– Noting sheets of Disciplinary Authority.

ನಿ.ಎಂ.28– Dismissal order dated 19.11.2019.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎನ್ ಎಸ್ ಬಿ ವಕೀಲರಿಂದಃ**

3. ಕೆ ಎಸ್ ಆರ್ ಟಿ ಸಿ ನೌಕರರು ಆಗ್ಗಾಗ್ಗೆ ವರ್ಗಾವಣೆ ಆಗುತ್ತಿರುತ್ತಾರೆ ಮತ್ತು ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಾರೆ ಎಂದರೆ ಹೌದು . ವಿಚಾರಣೆ ಹಂತದಲ್ಲಿ ನೋಟಿಸು ನೀಡುವಾಗ ಕ್ಲೇಮುದಾರನ ವಾಸ್ತವ್ಯದ ವಿಳಾಸವನ್ನು ತಿಳಿದುಕೊಂಡಿದ್ದೇನಾ ಎಂದರೆ ಆತನ ಸೇವಾ ಪುಸ್ತಕದಲ್ಲಿ ನಮೂದಾಗಿದ್ದ ಆತನ ಖಾಯಂ ವಿಳಾಸಕ್ಕೆ ನೋಟಿಸು ಕಳುಹಿಸಿರುತ್ತೇನೆ. ನಾನು ಕಳುಹಿಸಿದ ನೋಟಿಸನ್ನು ಅಂಚೆ ಇಲಾಖೆಯವರು door locked ಎಂಬ ಶರಾದೊಂದಿಗೆ ವಾಪಸ್ಸು ಮಾಡಿದ್ದಾರೆ ಎಂದರೆ ಕೆಲವು ನೋಟಿಸುಗಳು ಸ್ವೀಕೃತವಾಗಿರುತ್ತವೆ. ವಿಚಾರಣೆಗೆ ಪೂರ್ವದಲ್ಲಿ ಕಳುಹಿಸಿದ ಯಾವುದೇ ನೋಟಿಸು ಕ್ಲೇಮುದಾರನಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಕೆಲವೊಂದು ಜಾರಿಯಾಗಿವೆ. ದೋಷಾರೋಪಣಾ ಪಟ್ಟಿಯಲ್ಲಿ ದಿನಾಂಕ 17.05.2018 ರಿಂದ 23.08.2018 ರವರೆಗೆ ಕ್ಲೇಮುದಾರ ಗೈರು ಹಾಜರು ಆದ ಬಗ್ಗೆ ಮಾತ್ರ ಉಲ್ಲೇಖಿಸಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಗೈರು ಆದ ಬಗ್ಗೆ ಕ್ಲೇಮುದಾರ ಇಲಾಖೆಗೆ ಸರಿಯಾದ ವಿವರಣೆಯನ್ನು ಸಲ್ಲಿಸಿದ್ದಾನೆ ಎಂದರೆ ಕಡತದಲ್ಲಿ ಆ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಂತರದ ಅವಧಿಗೆ ಅಂದರೆ ಅವನನ್ನು ಸೇವೆಯಿಂದ ವಜಾಗೊಳಿಸುವವರೆಗಿನ ಅವಧಿಗೆ ಪ್ರತ್ಯೇಕ ದೋಷಾರೋಪಣಾ ಪಟ್ಟಿ ಮತ್ತು ವಿಚಾರಣೆ ಆಗಿಲ್ಲ ಎಂದರೆ ಗೈರು ಆದ ಪ್ರಾರಂಭದ ದಿನಾಂಕದಿಂದ ಇಲ್ಲಿಯವರೆಗೂ ಎಂದು ದೋಷಾರೋಪಣಾ ಪಟ್ಟಿಯಲ್ಲಿ ಹೇಳಿ ಜಾರಿ ಮಾಡಲಾಗಿದೆ .

4. ನಾನು ಕ್ಲೇಮುದಾರನ ಸರಿಯಾದ ವಿಳಾಸ ಒದಗಿಸುವಂತೆ ಇಲಾಖೆಯನ್ನು ಕೇಳಿರುವುದಿಲ್ಲ. ಅವನ ಸೇವಾ ಪುಸ್ತಕದಲ್ಲಿ ಇದ್ದ ಖಾಯಂ ವಿಳಾಸಕ್ಕೆ ನೋಟಿಸು ಕಳುಹಿಸಲಾಗಿದೆ. ನಾನು ಕ್ಲೇಮುದಾರನ ಹಾಜರಿಯನ್ನು ತೋರಿಸದೇ ಸಂಸ್ಥೆಗೆ ಸಹಾಯ ಮಾಡಲು ಅವನಿಗೆ ವಿಚಾರಣೆಗೆ ಅವಕಾಶ ನೀಡದೇ ಸುಳ್ಳು ವಿಚಾರಣಾ ವರದಿ ಸಲ್ಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಇಲಾಖಾ ವಿಚಾರಣಾ ಅಧಿಕಾರಿಯಾಗಲು ನನಗೆ ಅರ್ಹತೆ ಇರಲಿಲ್ಲ ಎಂದರೆ ಸರಿಯಲ್ಲ. ಮೂರು ತಿಂಗಳ ಗೈರು ಬಗ್ಗೆ ಕ್ಲೇಮುದಾರ ಕೊಟ್ಟಿದ್ದ ವಿವರಣೆಯನ್ನು ಪರಿಗಣನೆಗೆ ತೆಗೆದುಕೊಳ್ಳದೇ ಕಾನೂನು ಬಾಹಿರವಾಗಿ ವಿಚಾರಣೆ ಮಾಡಿ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನೈಸರ್ಗಿಕ ನ್ಯಾಯ ನಿಯಮ ಮತ್ತು C & D

ನಿಯಮ ಪಾಲನೆ ಮಾಡದೇ ವಿಚಾರಣೆ ಮಾಡಿದೆ ಎಂಬ ನೆಪದಲ್ಲಿ ಸುಳ್ಳು ವಿಚಾರಣಾ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕ್ಲೇಮುದಾರನಿಗೆ ನಿಯಮಾನುಸಾರ ವಿಚಾರಣೆಯಲ್ಲಿ ಭಾಗವಹಿಸಲು ಅವಕಾಶ ನೀಡಿದ್ದರೆ ಅವನನ್ನು ವಜಾ ಮಾಡುವ ಪರಿಸ್ಥಿತಿ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಂಸ್ಥೆಯ ನೌಕರ ಆಗಿ ನಾನು ಸಂಸ್ಥೆಯ ಹಂಗಿಗೆ ಒಳಪಟ್ಟು ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳೆಲ್ಲಾ ಸುಳ್ಳು ಇವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ನಾನೇ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ